Reg. No. D. 221

भारत का राजपत्र
The Gazette of India
ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, आगष्ट 5, 1985 | श्रावण 14, 1907 (शक) | खण्ड–3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |


## MINISTRY OF LAW, AND JUSTICE

(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely.—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act. 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫ ; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬ ; (೩) ಭಾರತ ಅನುಭೋಗ ಅಧಿನಿಯಮ, ೧೮೮೨ ; (೪) ಬೇಸಾಯಗಾರರ ಸಾಲ ಅಧಿನಿಯಮ ೧೮೮೪ ; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮ ; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧ ; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬ ; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬ ; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪ ; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧ ; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಂಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10+13 = 23

## ಬೇಸಾಯಗಾರರ ಸಾಲ ಅಧಿನಿಯಮ, 1884

## (1884ರ ಅಧಿನಿಯಮ ಸಂಖ್ಯೆ 12)

[24ನೇ ಜುಲೈ, 1884.]

ಉತ್ತರ ಭಾರತ ತಕ್ಕಾವಿ ಅಧಿನಿಯಮ, 1879ರ ವಿಸ್ತರಣೆಗಾಗಿ ತಿದ್ದುಪಡಿ ಮಾಡುವ ಮತ್ತು ಅದರ ವಿಸ್ತರಣೆಗೆ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

ಉತ್ತರ ಭಾರತ ತಕ್ಕಾವಿ ಅಧಿನಿಯಮ, 1879 (1879 ರ 10)ನ್ನು ತಿದ್ದುಪಡಿ ಮಾಡುವುದು ಮತ್ತು ಅದನ್ನು ಕೆಲವು ಇತರ ಪ್ರದೇಶಗಳಿಗೆ ವಿಸ್ತರಿಸುವುದು ವಿಹಿತವಾಗಿರುವುದರಿಂದ;

ಅದನ್ನು ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಬೇಸಾಯಗಾರರ ಸಾಲ ಅಧಿನಿಯಮ, 1884 ಎಂದು ಕರೆಯತಕ್ಕದ್ದು.

(2) ಇದು 1884ರ ಆಗಸ್ಟ್‌ನ ಮೊದಲನೇ ದಿನದಂದು ಜಾರಿಗೆ ಬರತಕ್ಕದ್ದು.

**2. ಸ್ಥಳೀಯ ವ್ಯಾಪ್ತಿ.**– ಈ ಪ್ರಕರಣವು, 1956ರ ನವೆಂಬರ್ ಮೊದಲನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯ ಕ್ಷೇತ್ರಗಳನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(2) ಈ ಅಧಿನಿಯಮದ ಉಳಿದ ಭಾಗವು, ಪ್ರಥಮತಃ ಉತ್ತರ ಪ್ರದೇಶ, ಮಧ್ಯ ಪ್ರಾಂತ್ಯಗಳು, ಅಸ್ಸಾಂ ಮತ್ತು ದೆಹಲಿ ಮತ್ತು ನವೆಂಬರ್ 1, 1956ರ ನಿಕಟಪೂರ್ವದಲ್ಲಿ ಮುಂಬಯಿ, ಪಂಜಾಬ್ ಮತ್ತು ಅಜ್ಮೀರ್ ರಾಜ್ಯಗಳಲ್ಲಿ ಅಡಕವಾಗಿದ್ದ ರಾಜ್ಯ ಕ್ಷೇತ್ರಗಳು, ಇವುಗಳಿಗೆ ಮಾತ್ರ ವ್ಯಾಪ್ತವಾಗುತ್ತದೆ.

(3) ಆದರೆ ಇತರ ಯಾವುದೇ ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಕಾಲಕಾಲಕ್ಕೆ ಅಧಿಸೂಚಿಸುವ ಮೂಲಕ, ತನ್ನ ಆಡಳಿತದಲ್ಲಿರುವ ಇಡೀ ರಾಜ್ಯ ಕ್ಷೇತ್ರಗಳಿಗೆ ಅಥವಾ ಅದರ ಯಾವುದೇ ಭಾಗಕ್ಕೆ, ಈ ಅಧಿನಿಯಮದ ಉಳಿದ ಭಾಗವನ್ನು ವ್ಯಾಪ್ತಿಗೊಳಿಸಬಹುದು.

**3. [1879ರ ಅಧಿನಿಯಮ ಸಂಖ್ಯೆ 10 ಮತ್ತು 1880ರ ಅಧಿನಿಯಮ ಸಂಖ್ಯೆ 15ರ ಪ್ರಕರಣ 4 ಮತ್ತು 5ರ ನಿರಸನ.**– ***]

**4. ರಾಜ್ಯ ಸರ್ಕಾರಕ್ಕಿರುವ ನಿಯಮ ರಚನಾಧಿಕಾರ.**– (1) ರಾಜ್ಯ ಸರ್ಕಾರವು ಅಥವಾ ರಾಜಸ್ವ ಮಂಡಳಿಯು ಅಥವಾ ಆರ್ಥಿಕ ಕಮೀಷನರನು ಇರುವ ರಾಜ್ಯದಲ್ಲಿ, ಆ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಅಂಥ ಮಂಡಳಿಯು ಅಥವಾ ಆರ್ಥಿಕ ಕಮೀಷನರನು, ಸಾಗುವಳಿ ಯೋಗ್ಯವಾದ ಭೂಮಿಯ

ಒಡೆಯರಿಗೆ ಮತ್ತು ಅಧಿಭೋಗದಾರರಿಗೆ ಕಷ್ಟ ಪರಿಹಾರಕ್ಕಾಗಿ, ಬೀಜವನ್ನು ಅಥವಾ ಜಾನುವಾರನ್ನು ಕೊಳ್ಳುವುದಕ್ಕಾಗಿ ಅಥವಾ ಭೂ ಮೇಲ್ಪಾಟು ಸಾಲಗಳ ಅಧಿನಿಯಮ, 1883 (1883ರ 19)ರಲ್ಲಿ ನಿರ್ದಿಷ್ಟಪಡಿಸದಿರುವ, ಆದರೆ ಬೇಸಾಯದ ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಉದ್ದೇಶಕ್ಕಾಗಿ ಸಾಲಗಳನ್ನು ಕೊಡುವ ಬಗ್ಗೆ, ಕಾಲಕಾಲಕ್ಕೆ ನಿಯಮಗಳನ್ನು ರಚಿಸಬಹುದು.

(2) ಅಂಥ ಎಲ್ಲ ನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**5. ಸಾಲಗಳ ವಸೂಲಿ.–** ಅಂಥ ನಿಯಮಗಳಿಗನುಸಾರವಾಗಿ ಕೊಡಲಾದ ಪ್ರತಿಯೊಂದು ಸಾಲವು ಅದರ ಮೇಲೆ ವಿಧಿಸಬಹುದಾದ ಎಲ್ಲಾ ಬಡ್ಡಿಯು (ಯಾವುದಾದರೂ ಇದ್ದರೆ) ಮತ್ತು ಆ ಸಾಲವನ್ನು ಕೊಡಲು ಅಥವಾ ವಸೂಲಿ ಮಾಡಲು ತಗುಲಿದ ಖರ್ಚುಗಳು (ಯಾವುದಾದರೂ ಇದ್ದರೆ), ಅದನ್ನು ತೀರಿಸಬೇಕಾದ ಸಮಯ ಬಂದಾಗ, ಯಾರಿಗೆ ಸಾಲವನ್ನು ಕೊಡಲಾಗಿತ್ತೋ ಆ ವ್ಯಕ್ತಿಯಿಂದ ಅಥವಾ ಅದರ ಮರು ಸಂದಾಯದ ಬಗ್ಗೆ ಜಾಮೀನಾಗಿರುವ ಯಾರೇ ವ್ಯಕ್ತಿಯಿಂದ ಅವು ಭೂ ಕಂದಾಯದ ಬಾಕಿಯಾಗಿದ್ದರೆ ಅಥವಾ ಯಾವ ವ್ಯಕ್ತಿಗೆ ಸಾಲವನ್ನು ಕೊಡಲಾಗಿತ್ತೋ ಅವನಿಂದ ಅಥವಾ ಅವನ ಜಾಮೀನುದಾರನಿಂದ ಬರಬೇಕಾದ ಸಾಲವನ್ನು ವಸೂಲಿ ಮಾಡಲು ತಗುಲಿದ ಖರ್ಚುಗಳಾಗಿದ್ದರೆ ಹೇಗೋ ಹಾಗೆ ವಸೂಲೀಯವಾಗಿರತಕ್ಕದ್ದು.

**6. ಜಂಟಿ ಸಾಲಗಾರರಿಗೆ ಇರುವ ಪರಸ್ಪರ ಹೊಣೆಗಾರಿಕೆ.–** ಗ್ರಾಮ ಸಮುದಾಯದ ವ್ಯಕ್ತಿಗಳಿಗೆ ಅಥವಾ ಇತರ ಯಾರೇ ವ್ಯಕ್ತಿಗಳಿಗೆ ಸಾಲಕ್ಕೆ ಸಂಬಂಧಿಸಿದ ಸಂದಾಯ ಮಾಡಬೇಕಾಗಿರುವ ಇಡೀ ಮೊಬಲಗಿನ ಸಂದಾಯದ ಬಗ್ಗೆ ಸರ್ಕಾರಕ್ಕೆ ಅವರು ಜಂಟಿಯಾಗಿ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿ ಬದ್ಧರಾಗಿರುವರೆಂಬ ನಿಬಂಧನೆಗಳ ಮೇಲೆ, ಈ ಅಧಿನಿಯಮದ ಮೇರೆಗೆ ಸಾಲವನ್ನು ಕೊಟ್ಟಾಗ ಮತ್ತು ಆ ಮೊಬಲಗಿನಲ್ಲಿ ಅವರಲ್ಲಿ ಪ್ರತಿಯೊಬ್ಬನು ಕೊಡಲು ಬದ್ಧನಾಗಿರುವ ಭಾಗವನ್ನು ತಿಳಿಸುವ ವಿವರವನ್ನು, ಆ ಸಾಲವನ್ನು ಕೊಡುವ ಬಗೆಗಿನ ಆದೇಶದಲ್ಲಿ ನಮೂದಿಸಿರುವಾಗ ಮತ್ತು ಅದಕ್ಕೆ ಅವರಲ್ಲಿ ಪ್ರತಿಯೊಬ್ಬನು ಅಥವಾ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತನಾದ ಅವನ ಏಜೆಂಟನು ಮತ್ತು ಆದೇಶವನ್ನು ಮಾಡಿದ ಅಧಿಕಾರಿಯು ಸಹಿ ಮಾಡಿರುವಾಗ, ಗುರುತು ಹಾಕಿರುವಾಗ ಅಥವಾ ಮೊಹರು ಹಾಕಿರುವಾಗ ಆ ವಿವರವು ಅವರಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಕೊಡಲು ಬದ್ಧನಾಗಿರುವ ಮೊಬಲಗಿನ ಭಾಗದ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

* * * * *